# ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಸಾಗರ.

ಸಿ.ಸಿ. ನಂ. 784/2022.

| ಫಿರ್ಯಾದಿ:- | ವಿರುದ್ಧ | ಆರೋಪಿ:- |
|---|---|---|
| ರಾಮಚಂದ್ರಪ್ಪ ತಂದೆ ಕುಂಬತ್ತಿಬಸಪ್ಪ,<br>ವಯಸ್ಸು ಸುಮಾರು 71 ವರ್ಷ,<br>ಉದ್ಯೋಗ: ವ್ಯವಸಾಯ,<br>ವಾಸ: ಬಸವನಬ್ಯಾಣ, ಬರೂರು ಗ್ರಾಮ,<br>ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. | | ಪರಶುರಾಮ ಬಿನ್ ಚೌಡಪ್ಪ,<br>ವಯಸ್ಸು ಸುಮಾರು 45 ವರ್ಷ,<br>ಕಾರ್ಯನಿರ್ವಣಾಧಿಕಾರಿ<br>ವ್ಯವಸಾಯ ಸೇವಾ ಸಹಕಾರ ಸಂಘ ನಿ.,<br>ಬರೂರು.<br>ವಾಸ: ಬರೂರು ಗ್ರಾಮ ಮತ್ತು ಅಂಚೆ<br>ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. |

## ಆಪಾದನೆ

ಆರೋಪಿಯಾದ ನೀವು ಮತ್ತು ಪಿರ್ಯಾದುದಾರರು ಪರಸ್ಪರ ಪರಿಚಯಸ್ಥರಾಗಿದ್ದು, ಆರೋಪಿತನಾದ ನೀವು ನಿಮ್ಮ ಗೃಹಕೃತ್ಯದ ಅಡಚಣೆಯನ್ನು ನಿವಾರಿಸುವ ಸಲುವಾಗಿ ಪಿರ್ಯಾದುದಾರರಿಂದ ರೂ. 2,10,000/- ಗಳ ಕೈಗಡ ಸಾಲವನ್ನು ದಿನಾಂಕ: 05.03.2022 ರಂದು ಪಡೆದು, ಸದರಿ ಹಣವನ್ನು ಮೂರು ತಿಂಗಳ ಒಳಗಾಗಿ ಮರುಪಾವತಿಸುವುದಾಗಿಯು ತಿಳಿಸಿರುತ್ತೀರಿ. ಆದರೆ, ನೀವು ಸಕಾಲದಲ್ಲಿ ಹಣವನ್ನು ಮರುಪಾವತಿಸಿರುವುದಿಲ್ಲ. ನಂತರ, ಪಿರ್ಯಾದುದಾರರು ಹಣ ಪಾವತಿಸುವಂತೆ ಕೇಳಿಕೊಂಡಾಗ, ದಿನಾಂಕ: 04.07.2022 ರಂದು ನೀವು, ನಿಮ್ಮ ಖಾತೆ ಇರುವ ಶಿವಮೊಗ್ಗ ಡಿಸ್ಟ್ರಿಕ್ ಕೋ ಆಪರೇಟಿವ್ ಸೆಂಟ್ರಲ್ ಬ್ಯಾಂಕ್, ಸಾಗರ ಶಾಖೆಗೆ ಸೇರಿದ ಚೆಕ್ ನಂ. 129849 ರ ಮೇಲೆ ರೂ. 2,10,000/- ಮತ್ತು ದಿನಾಂಕ: 04.07.2022 ನಮೂದಿಸಿ, ನಗದಿಕರಿಸಲು ನೀಡಿರುತ್ತೀರಿ.

ನಂತರ, ಫಿರ್ಯಾದುದಾರರು ತಮ್ಮ ಖಾತೆ ಇರುವ ಶಿವಮೊಗ್ಗ ಡಿಸ್ಟ್ರಿಕ್ ಕೋ ಆಪರೇಟಿವ್ ಸೆಂಟ್ರಲ್ ಬ್ಯಾಂಕ್, ಸಾಗರ ಶಾಖೆಗೆ ನೀವು ನೀಡಿದ ಚೆಕ್ಕನ್ನು ದಿನಾಂಕ: 04.07.2022 ರಂದು ಸಲ್ಲಿಸಿದಾಗ, 'ಫಂಡ್ ಎನ್ ಸಫಿಶಿಯಂಟ್' ಎಂಬ ಹಿಂಬರಹದೊಂದಿಗೆ ದಿನಾಂಕ: 04.07.2022 ರಂದು ವಾಪಾಸ್ಸು ಬಂದಿರುತ್ತದೆ. ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂಬ ವಿಚಾರ ಪಿರ್ಯಾದಿದಾರರಿಗೆ ತಿಳಿದ ನಂತರ, ದಿನಾಂಕ: 05.07.2022 ರಂದು ವಕೀಲರ ಮೂಲಕ ಸಾಲ ಮರುಪಾವತಿಸುವಂತೆ ನೋಟಿಸ್ ಕಳುಹಿಸಿದ್ದು, ನಿಮಗೆ ದಿನಾಂಕ: 07.07.2022 ರಂದು ಜಾರಿಯಾಗಿದ್ದರೂ ಸಹಾ ನೀವು ಸಾಲವನ್ನು ಮರುಪಾವತಿಸದೇ, ಫಿರ್ಯಾದುದಾರರಿಗೆ ಮೋಸ,

ವಂಚನೆ ಮಾಡಬೇಕೆಂಬ ಉದ್ದೇಶದಿಂದ ಚೆಕ್ಕು ನೀಡಿ, ಆ ಮೂಲಕ ನೀವು, ಎನ್. ಐ. ಆಕ್ಟ್ ಕಲಂ 138 ರಡಿಯಲ್ಲಿ ಅಪರಾಧವೆಸಗಿರುತ್ತೀರಿ ಎಂದು ಈ ಮೂಲಕ ಆಪಾದಿಸಲಾಗಿದ್ದು, ಅದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

(ಆಪಾದನೆಯನ್ನು ದಿನಾಂಕಃ 30.09.2024 ರಂದು ತೆರೆದ ನ್ಯಾಯಾಲಯದಲ್ಲಿ ಮಾಡಲಾಗಿದೆ.)

ಪ್ರಶ್ನೆ. 1. ನಿಮಗೆ ಈ ಪ್ರಕರಣದಲ್ಲಿ ಮಾಡಿರುವ ಆಪಾದನೆ ಅಂಶಗಳನ್ನು ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಲಾಗಿ ಮನವರಿಕೆಯಾಯಿತೇ?
ಉತ್ತರಃ-

ಪ್ರಶ್ನೆ. 2. ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?
ಉತ್ತರಃ-

(ಚಾಂದಿನಿ ಜಿ.ಯು.)
ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.